# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ, ವಾರ್ಡ್ ಸಮಿತಿ /ಸಹಾಯಕ ಇಂಜಿನಿಯರ್‌ರವರ ಕಛೇರಿ, ವೃಷಭಾವತಿನಗರ ವಾರ್ಡ್–102,
3ನೇ ಮುಖ್ಯರಸ್ತೆ, ಬಿ.ಇ.ಎಮ್.ಎಲ್. ಲೇಔಟ್, ಬೆಂಗಳೂರು–79.

**ಸಂಖ್ಯೆ: ವಾ–102/ವಾ.ಸ./ಸಭಾನಡವಳಿ–18/2021–22** **ದಿನಾಂಕ: 19/06/2021**

**–:ಸಭೆಯ ನಡವಳಿಗಳು:–**

ಮಾನ್ಯ ನೋಡಲ್ ಅಧಿಕಾರಿಯವರ ಆದೇಶದಂತೆ, ದಿನಾಂಕ: 19/06/2021 ಶನಿವಾರದಂದು ಬೆಳಿಗ್ಗೆ 10.00 ಘಂಟೆಗೆ ವಾರ್ಡ್–102 ವೃಷಭಾವತಿನಗರ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ಆಯೋಜಿಸಲಾಯಿತು.

ಶ್ರೀ ಜಿ.ಪ್ರಕಾಶ್ ಸಮಿತಿಯ ಕಾರ್ಯದರ್ಶಿಗಳು ರವರು ಸಭೆಯನ್ನು ನಡೆಸುತ್ತಾ, ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್–19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಯಲ್ಲಿ ಉಪಸ್ಥಿತರಾಗಿರುವ ಮಾನ್ಯ ನೋಡಲ್ ಅಧಿಕಾರಿಯವರಿಗೆ ಮತ್ತು ಸಭೆಗೆ ಆಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತ ಕೋರುತ್ತಾ, ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

| | |
|---|---|
| 1 | ಶ್ರೀ. ಕೆ. ವಿಜಯ್ ಶೇಖರ್<br>ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು, ವಾರ್ಡ್–102 |
| 2 | ಶ್ರೀಹೆಚ್.ರಂಗನಾಥ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ನಾಗಪುರ ಉಪವಿಭಾಗ, ಬಿಬಿಎಂಪಿ. |
| 2 | ಶ್ರೀ ಜಿ. ಪ್ರಕಾಶ್, ಕಾರ್ಯದರ್ಶಿ ಮತ್ತು ಸಂಚಾಲಕರು, ವಾರ್ಡ್ ಸಮಿತಿ ವಾ–102 ಹಾಗೂ ಸಹಾಯಕ ಅಭಿಯಂತರರು, ವಾರ್ಡ್–102. |
| 3 | ಶ್ರೀ ಜಿ.ಆರ್.ಗೋವಿಂದ ರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–102 |
| 4 | ಶ್ರೀ ಕೆ.ವಿ. ಲೋಕೇಶ್, ಹಿರಿಯ ಪಶುವೈದ್ಯಕೀಯ ಪರಿವೀಕ್ಷಕರು, ಬಿಬಿಎಂಪಿ. |
| 5 | ಶ್ರೀ ಎಸ್.ಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು, (ಗುತ್ತಿಗೆ) ವಾರ್ಡ್–102 |
| 6 | ಶ್ರೀ ದಿನೇಶ್ ಕೆ.ಹೆಚ್, ಕಾಮಗಾರಿ ಪರಿವಿಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 7 | ಶ್ರೀ ಬಿ.ಆರ್.ಮಂಜುನಾಥ್, ಟ್ಯಾಕ್ಸ್ ಇನ್ಸ್‌ಪೆಕ್ಟರ್, ವಾರ್ಡ್–102 |
| 8 | ಶ್ರೀ ವಿನೋದ್, ವಾರ್ಡ್ ಮಾರ್ಷಲ್, ವಾರ್ಡ್–102 |
| 9 | ಶ್ರೀ ಹೇಮಂತ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 10 | ಶ್ರೀ ಚಂದ್ರಪ್ಪ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 11 | ಶ್ರೀಮತಿ ಪ್ರೇಮ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 12 | ಶ್ರೀ ರಾಜ್ ಕುಮಾರ್, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |
| 13 | ಶ್ರೀಮತಿ ಗೌರಿ, ಸದಸ್ಯರು, ವಾರ್ಡ್ ಸಮಿತಿ ವಾರ್ಡ್–102 |

ಪು.ತಿ.ನೋ.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

**1) ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

- ಮಾನ್ಯ ನೋಡಲ್ ಅಧಿಕಾರಿಯವರು ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ ಮಾತನಾಡುತ್ತಾ, ವಾರ್ಡ್-102 ವೃಷಭಾವತಿನಗರದಲ್ಲಿ ಕೋವಿಡ್-19ಗೆ ಸಂಭಂಧಿಸಿದಂತೆ ಮಾಹಿತಿಗಳ ವಿವರಣೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.
- ಶ್ರೀಗೋವಿಂದರಾಜುಲು, ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯ 45 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ನೀಡಲಾಗುತ್ತಿದೆ ಮತ್ತು ಪ್ರತಿದಿನ ವಾರ್ಡ್ ವ್ಯಾಪ್ತಿಯಲ್ಲಿ 150-200 ಸಾರ್ವಜನಿಕರನ್ನು ಕೋವಿಡ್-19 ಪರೀಕ್ಷೆಗೆ ಒಳಪಡಿಸಲಾಗುತ್ತಿದ್ದು, ಕೊನೆಯ 15 ದಿನಗಳಿಂದ 31 ಆಕ್ಟಿವ್ ಕೇಸ್‌ಗಳಿದ್ದು ಅದರಲ್ಲಿ 30 ಜನರು ಹೋಮ್ ಐಸೋಲೇಷನ್ ಮತ್ತು 01 ಜನರು ಆಸ್ಪತ್ರೆಯಲ್ಲಿರುತ್ತಾರೆ. 02 ಮಂದಿ ಸೋಂಕಿತರು ಸಾವಿಗೀಡಾಗಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು.
- ಮುಂದುವರೆದು, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕಿತರು ವಾಸಿಸುವ ನಿವಾಸದ ಮುಂದೆ ಕಾಷನ್ ಟೇಪ್ ಅಳವಡಿಸಿ ಮೈಕ್ರೋ ಕಂಟೈನ್‌ಮೆಂಟ್ ಜೋನ್ ಮಾಡಲಾಗುತ್ತಿರುತ್ತದೆ. ಆದರೆ ತದನಂತರ ಮನೆಯ ನಿವಾಸಿಗಳು ಕಾಷನ್ ಟೇಪ್ ಅನ್ನು ಕಿತ್ತೆಸೆಯುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ಅಂತಹವರ ಮೇಲೆ ಕಾನೂನು ಕ್ರಮವಹಿಸುವುದು ಮತ್ತು ಸೋಂಕಿತರನ್ನು ಹೆಚ್ಚಾಗಿ ಪತ್ತೆ ಹಚ್ಚಲು ಸಾರ್ವಜನಿಕರನ್ನು ಹೆಚ್ಚಾಗಿ ಸೋಂಕು ಪರೀಕ್ಷೆಗೆ ಒಳಪಡಿಸಲು ಸೂಕ್ತ ಕ್ರಮ ವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.
- ಶ್ರೀವಿನೋದ್, ವಾರ್ಡ್ ಮಾರ್ಷಲ್, ವಾರ್ಡ್-102 ರವರು ಮಾತನಾಡುತ್ತಾ, ದಿನನಿತ್ಯ ಮಾಸ್ಕ್ ಹಾಕದೇ ತಿರುಗುವವರಿಗೆ ಕನಿಷ್ಠ 10 ಮಂದಿಗೆ ದಂಡ ವಿಧಿಸುವ ಕಾರ್ಯವನ್ನು ಮಾಡುವಂತೆ ಸೂಚಿಸಲಾಗಿರುತ್ತದೆ ಆದರೆ ವಿಜಯ ಅಪಾರ್ಟ್‌ಮೆಂಟ್ ಬಳಿಯಲ್ಲಿ ಮಾಸ್ಕ್ ಅಳವಡಿಸದ ವ್ಯಕ್ತಿಗೆ ದಂಡ ವಿಧಿಸಲು ಹೋದಾಗ ಜಗಳ ಮಾಡುತ್ತಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು.
- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಅಂತಹ ಘಟನೆಗಳು ಸಂಭವಿಸಿದಾಗ ಮೇಲಾಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸಿಕೊಳ್ಳಬೇಕು ಮತ್ತು ಜನರಲ್ಲಿ ಮಾಸ್ಕ್ ಅಳವಡಿಸುವುದರ ಬಗ್ಗೆ ಜಾಗೃತಿ ಮೂಡಿಸಲು ಕ್ರಮವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.

**2) ಅಭಿಯಂತರರ ವಿಭಾಗದ ಬಗ್ಗೆ:-**

- ಶ್ರೀಮತಿ ಪ್ರೇಮ, ಸದಸ್ಯರು ರವರು ಮಾತನಾಡುತ್ತಾ, 11ನೇ ಮುಖ್ಯರಸ್ತೆಯಲ್ಲಿ ತುಂಬಾ ರಸ್ತೆಗುಂಡಿಗಳು ಮಾರ್ಪಾಡಾಗಿದ್ದು, ಜನರ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿರುತ್ತದೆ. ಅದರಿಂದಾಗಿ ಸದರಿ ರಸ್ತೆಗೆ ಶೀಘ್ರವಾಗಿ ಡಾಂಬರೀಕರಣಗೊಳಿಸುವಂತೆ ಸಭೆಯಲ್ಲಿ ಕೋರಿದರು.
- ಸಹಾಯಕ ಅಭಿಯಂತರರು ಮಾತನಾಡುತ್ತಾ, ಸದರಿ ರಸ್ತೆಗೆ ಶೀಘ್ರವಾಗಿ ಡಾಂಬರೀಕರಣಗೊಳಿಸಲು ಸೂಕ್ತ ಕ್ರಮವಹಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.
- ಮುಂದುವರೆದು ವಾರ್ಡ್‌ವ್ಯಾಪ್ತಿಯಲ್ಲಿ ಪ್ರತಿದಿನ ರಸ್ತೆಬದಿಯಲ್ಲಿ ಬಿದ್ದಿರುವ ಡೆಬ್ರಿಸ್ ಹಾಗೂ ಶೌಲ್ಡರ್ ಡ್ರೇನ್‌ಗಳನ್ನು ಸ್ವಚ್ಛಗೊಳಿಸುವ ಕಾರ್ಯವು ಕೈಗೊಳ್ಳಲಾಗಿರತ್ತದೆ ಎಂದು ಸಭೆಗೆ ತಿಳಿಸಿದರು.
- ಸಣ್ಣಕ್ಕಿಬಯಲಿನ 11ನೇ ಮುಖ್ಯರಸ್ತೆಯಲ್ಲಿ ತರಕಾರಿ ವ್ಯಾಪಾರಿಗಳು ವ್ಯಾಪಾರ ಮುಗಿದ ನಂತರ ತಳ್ಳುವ ಗಾಡಿಯನ್ನು ರಸ್ತೆ ಬದಿಯಲ್ಲಿ ನಿಲ್ಲಿಸಿರುತ್ತಾರೆ, ಆದರೆ ಬೆಳಗಿನ ಜಾವದಲ್ಲಿ ಕೆಲವು ಪೋಕಿರಿ ಹುಡುಗರು ಗಾಡಿಗಳನ್ನು ರಸ್ತೆಯ ಮಧ್ಯಕ್ಕೆ ತಳ್ಳುತ್ತಿರುತ್ತಾರೆ ಎಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿಯವರು ಮಾತನಾಡುತ್ತಾ, ಸದರಿ ವಿಷಯವಾಗಿ ಪೊಲೀಸರಿಗೆ ತಿಳಿಸಿ ಗಸ್ತು ತಿರುಗುವಂತೆ ಹಾಗೂ ಅಂತಹವರನ್ನು ಗುರುತಿಸಿ ಶಿಕ್ಷೆಗೆ ಒಳಪಡಿಸುವಂತೆ ತಿಳಿಸಲು ಸಭಾಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.
- ಎಲ್ಲಾ ಸದಸ್ಯರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಡೆಬ್ರಿಸ್ ತೆರವುಗೊಳಿಸುವ ಕಾರ್ಯವು ಪ್ರತಿನಿತ್ಯ ನಡೆಯುತ್ತಿದ್ದು, ಯಾವುದೇ ಸಮಯದಲ್ಲಿ ದೂರುಗಳು ಬಂದಾಗ ಕಾಮಗಾರಿ ಇಲಾಖೆ, ಘ.ತ್ಯಾ. ಇಲಾಖೆ, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ತ್ವರಿತವಾಗಿ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಬಗೆಹರಿಸುತ್ತಿದ್ದಾರೆಂದು ಸಭೆಯಲ್ಲಿ ಪ್ರಶಂಸೆ ವ್ಯಕ್ತಪಡಿಸಿದರು.

3) <u>ಘನತ್ಯಾಜ್ಯ ನಿರ್ವಹಣೆ ವಿಭಾಗದ ಬಗ್ಗೆ:-</u>

- ಶ್ರೀಬಾಬು, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ಚರ್ಚ್ ರಸ್ತೆ ಮತ್ತು ವಿನಾಯಕ ನಗರದ ಟ್ರಾನ್ಸ್‌ಫಾರ್ಮರ್ ಬಳಿಯಲ್ಲಿ ಹೊರ ರಾಜ್ಯಗಳಿಂದ ಬಂದಂತಹ ವಲಸೆ ಕಾರ್ಮಿಕರು ಎಷ್ಟು ಬಾರಿ ಎಚ್ಚರಿಸಿದರು ಮತ್ತೆ ಮತ್ತೆ ಕಸವನ್ನು ಬಿಸಾಡುತ್ತಿರುತ್ತಾರೆ ಎಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡಲ್ ಅಧಿಕಾರಿ ರವರು ಮಾತನಾಡುತ್ತಾ, ಅಂತಹ ಘಟನೆಗಳು ನಡೆದಾಗ ಅಂತಹವರಿಗೆ ದಂಡವಿಧಿಸಿ ಸೂಕ್ತ ಕ್ರಮ ವಹಿಸುವಂತೆ ಸಭೆಯಲ್ಲಿ ತಿಳಿಸಿದರು.
- ಸಹಾಯಕ ಕಾರ್ಯಪಾಲಕ ಅಭಿಯಂತರರು, ನಾಗಪುರ ಉಪವಿಭಾಗ ರವರು ಮಾತನಾಡುತ್ತಾ, ಬ್ಲಾಕ್ ಸ್ಪಾಟ್‌ಗಳು ಮತ್ತು ರಸ್ತೆ ಬದಿಯ ಶೌಲ್ಡರ್‌ಗಳ ಬಳಿಯಲ್ಲಿ ಕಸವನ್ನು ತೆರವುಗೊಳಿಸಲು ಸೂಕ್ತ ಕ್ರಮವಹಿಸಬೇಕಾಗಿ ಸಭೆಯಲ್ಲಿ ತಿಳಿಸಿದರು.
- ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ರಾತ್ರಿ ಪಾಳಿಯಲ್ಲಿ ಕಸ ಹಾಕದಂತೆ ತಡೆಯಲು ಬಿಬಿಎಂಪಿ ಮಾರ್ಷಲ್ಸ್ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರ ಸಹಯೋಗದೊಂದಿಗೆ ರಾತ್ರಿ 10-00 ರಿಂದ 12-00 ಘಂಟೆ ಮತ್ತು ಬೆಳಿಗ್ಗೆ 4-00 ರಿಂದ 6-00 ಘಂಟೆಯವರೆಗೆ ಚರ್ಚ್ ರಸ್ತೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿ ತಿಳಿಸಿದರು.

4) <u>ಕಂದಾಯ ವಿಭಾಗದ ಬಗ್ಗೆ:-</u>

- ಮಾನ್ಯ ನೋಡಲ್ ಅಧಿಕಾರಿಯವರು ಮಾತನಾಡುತ್ತಾ, ವಾರ್ಡ್‌ನಲ್ಲಿ ಕಂದಾಯ ವಸೂಲಿ ಮಾಡಲು ತೆಗೆದುಕೊಂಡಿರುವ ಸೂಕ್ತ ಕ್ರಮಗಳ ಬಗ್ಗೆ ವರದಿಗಳನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ತೆರಿಗೆ ಪರಿವೀಕ್ಷಕರಿಗೆ ಸೂಚಿಸಿದರು.
- ಸಭೆಯಲ್ಲಿ ಹಾಜರಿದ್ದ ಶ್ರೀ ಮಂಜುನಾಥ್, ಟ್ಯಾಕ್ಸ್ ಇನ್ಸ್‌ಪೆಕ್ಟರ್ ವಾರ್ಡ್-102 ರವರು ಮಾತನಾಡುತ್ತಾ, ಈವರೆಗೂ ವಾರ್ಡ್‌ನಲ್ಲಿನ ಸಾರ್ವಜನಿಕರು ಸರಿಯಾದ ರೀತಿಯಲ್ಲಿ ತೆರಿಗೆ ಸಂಗ್ರಹಣೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು.

5) <u>ವಿದ್ಯುತ್ ವಿಭಾಗದ ಬಗ್ಗೆ:-</u>

- ಶ್ರೀ ಚಂದ್ರಪ್ಪ ಸದಸ್ಯರು ರವರು ಮಾತನಾಡುತ್ತಾ, ಮಾರುತಿನಗರ ಮತ್ತು ಹುಚ್ಚಪ್ಪ ಬಡಾವಣೆಯ ಕೆಲವು ಬೀದಿಗಳಲ್ಲಿ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಬೀದಿ ದೀಪಗಳ ನಿರ್ವಹಣೆ ಮಾಡುವ ಗುತ್ತಿಗೆದಾರರಿಗೆ ತಿಳಿಸಿ ಶೀಘ್ರವಾಗಿ ಪರಿಹರಿಸುವಂತೆ ತಿಳಿಸಲು ಸಭಾ ಕಾರ್ಯದರ್ಶಿಗಳಿಗೆ ಸಭೆಯಲ್ಲಿ ತಿಳಿಸಿದರು.

6) <u>ಬಿ.ಡಬ್ಲ್ಯೂ.ಎಸ್.ಎಸ್.ಬಿ. ವಿಭಾಗದ ಬಗ್ಗೆ:-</u>

- ಶ್ರೀಮತಿ ಪ್ರೇಮ ಮತ್ತು ಗೌರಮ್ಮ ಸದಸ್ಯರು ರವರು ಮಾತನಾಡುತ್ತಾ, ಸಣ್ಣಕ್ಕಿ ಬಯಲಿನ ತೋಟದ ರಸ್ತೆಯಲ್ಲಿ ಮತ್ತು ನಂಜಪ್ಪ ಬಡಾವಣೆಯ 14ನೇ ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್‌ನಿಂದ ತೆಗೆದ ಸಿಲ್ಟ್ ಅನ್ನು ತುಂಬಾ ದಿನಗಳಾದರೂ ತೆರವುಗೊಳಿಸಿರುವುದಿಲ್ಲ ಎಂದು ಸಭೆಯಲ್ಲಿ ದೂರಿದರು.
- ಮಾನ್ಯ ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ, ಸದರಿ ರಸ್ತೆಗಳಲ್ಲಿ ಮ್ಯಾನ್‌ಹೋಲ್‌ಗಳಿಂದ ತೆರವುಗೊಳಿಸಿದ ಸಿಲ್ಟ್‌ಗಳನ್ನು ಶೀಘ್ರವಾಗಿ ತೆರವುಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ಕೆ.ಹೆಚ್.ದಿನೇಶ್, ಕಾಮಗಾರಿ ಪರಿವೀಕ್ಷಕರು ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಸಭೆಯಲ್ಲಿ ತಿಳಿಸಿದರು.
- ಶ್ರೀಮತಿ ಪ್ರೇಮ ಸದಸ್ಯರು ರವರು ಮಾತನಾಡುತ್ತಾ, ತೋಟದ ರಸ್ತೆಯ ಗಣೇಶ ದೇವಸ್ಥಾನದ ಹತ್ತಿರ ಇರುವ ಕುಡಿಯುವ ನೀರಿನ ಸ್ಥಾವರಕ್ಕೆ ಕನೆಕ್ಷನ್ ಮಾಡಲಾದ ಬೋರ್‌ವೆಲ್ ಹಾಳಾಗಿದ್ದು ದುರಸ್ಥಿಗೊಳಿಸುವಂತೆ ಸಭೆಯಲ್ಲಿ ಕೋರಿದರು.
- ಶ್ರೀ ಕೆ.ಹೆಚ್.ದಿನೇಶ್, ಕಾಮಗಾರಿ ಪರಿವೀಕ್ಷಕರು ರವರು ಮಾತನಾಡುತ್ತಾ, ಸದರಿ ದೂರುಗಳಿಗೆ ಅನುಸಾರ ಗುರುತಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಸಭೆಗೆ ತಿಳಿಸಿದರು.

ವಾರ್ಡ್ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಭಾನಡವಳಿಗಳಿಗೆ ಅನುಸಾರವಾಗಿ ತಮ್ಮ ಇಲಾಖೆಗೆ ಸಂಬಂಧಿಸಿದ ದೂರುಗಳನ್ನು ಪಟ್ಟಿ ಮಾಡಿಕೊಂಡು ಸದರಿ ದೂರುಗಳನ್ನು ಸರಿಪಡಿಸಿರುವ ಬಗ್ಗೆ ಅಥವಾ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ದೃಢೀಕೃತ ಮಾಹಿತಿಗಳನ್ನು ತಪ್ಪದೇ **ವಾರ್ಡ್ ಕಮಿಟಿ ವಾರ್ಡ್-102 ವಾಟ್ಸ್ ಆಪ್ ಗ್ರೂಪ್** ನಲ್ಲಿ ಮತ್ತು ಪ್ರತೀ ವಾರ್ಡ್ ಸಮಿತಿ ಸಭೆಯಲ್ಲಿ ವರದಿ ಮಾಡಲು ಸೂಚಿಸುತ್ತಾ, ಸಭೆಯನ್ನು ಮುಕ್ತಾಯ ಗೊಳಿಸಲಾಯಿತು. ಸಭೆಯ ಕೊನೆಯಲ್ಲಿ ಸಮಿತಿ ಕಾರ್ಯದರ್ಶಿ ರವರು ಸಮಿತಿ ಸಭೆಗೆ ಆಗಮಿಸಿರುವ ಎಲ್ಲರಿಗೂ ವಂದಿಸಿದರು.

**ಕಾರ್ಯದರ್ಶಿ**
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ-102

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್-102

<u>ಪ್ರತಿಯನ್ನು</u>

1. ಮಾನ್ಯ ವಲಯ ವಿಶೇಷ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಅಭಿಯಂತರರು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ತಾಂತ್ರಿಕ ಸಹಾಯಕರಿಗೆ ಸಲ್ಲಿಸಿದೆ.
4. ಮಾನ್ಯ ಆರೋಗ್ಯ ಅಧಿಕಾರಿಗಳು, ಪಶ್ಚಿಮ ವಲಯ ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
5. ಮಾನ್ಯ ಅಧೀಕ್ಷಕ ಅಭಿಯಂತರರು, (ಘನತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
6. ಮಾನ್ಯ ಅರಣ್ಯಾಧಿಕಾರಿಗಳು, ಅರಣ್ಯ ವಿಭಾಗ ರವರಿಗೆ ಅವಗಾಹನೆಗೆ ತರಲು ಮತ್ತು ಅಗತ್ಯ ಕ್ರಮಕ್ಕಾಗಿ ಆಪ್ತ ಸಹಾಯಕರವರಿಗೆ ಸಲ್ಲಿಸಿದೆ.
7. ಮಾನ್ಯ ಅಧೀಕ್ಷಕರು, ತೋಟಗಾರಿಕೆ ಇಲಾಖೆ ರವರ ಅವಗಾಹನೆಗೆ ತರಲು ಹಾಗೂ ಅಗತ್ಯ ಕ್ರಮಕ್ಕಾಗಿ ಸಹಾಯಕರಿಗೆ ಸಲ್ಲಿಸಿದೆ.
8. ವೈದ್ಯಕೀಯ ಆರೋಗ್ಯ ಅಧಿಕಾರಿಗಳು, (ಪಶ್ಚಿಮ ವಲಯ) ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
10. ಕಂದಾಯ ಅಧಿಕಾರಿಗಳು, ಮಹಾಲಕ್ಷ್ಮೀಪುರಂ ವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು ನಾಗಪುರ ಉಪವಿಭಾಗ ರವರಿಗೆ ಸೂಕ್ತ ಕ್ರಮವಹಿಸಲು ಸಲ್ಲಿಸಿದೆ.
12. ಸಹಾಯಕ ಕಂದಾಯ ಅಧಿಕಾರಿಗಳು ನಾಗಪುರ ಉಪವಿಭಾಗ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ ವಿಭಾಗ) ನಾಗಪುರ ಉಪವಿಭಾಗ ರವರ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ರವರಿಗೆ ಸೂಕ್ತ ಕ್ರಮ ವಹಿಸಲು ಸಲ್ಲಿಸಿದೆ.
15. ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ.
16. ಕಛೇರಿಯ ಕಡತಕ್ಕೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

W-102 ವೃಷಭಾವತಿನಗರ

ದಿನಾಂಕ: 19/06/2021 ವೇಳೆಗೆ = 10.00ಗಂಟೆಗೆ

ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ RWAS ಸದಸ್ಯರುಗಳ ಹಾಜರಾತಿ

| ಕ್ರಮ ಸಂಖ್ಯೆ | ಹೆಸರು | ಪದನಾಮ | ಮೊಬೈಲ್ ಸಂಖ್ಯೆ | ಸಹಿ |
|---|---|---|---|---|
| 1) | ವಿಜಯಶೇಖರ್ | ನೋಡಲ್ ಆಫೀಸರ್ | 9448670084 | [signature] 19/6/2021 |
| 2) | ಪ್ರಕಾಶ್.ಜಿ. | ಕಾರ್ಯದರ್ಶಿ, W-102 | 9845236847 | [signature] 19/6/2021 |
| 3) | ಟಿ.ಆರ್.ಮಂಜುನಾಥ್ | T.I | 9743557879 | |
| 4) | ಗೋವಿಂದ್‌ರಾಜುಲು | SHI | 9845512187 | [signature] |
| 5) | ಬಾಬು. | JHI | 9632549664 | S. Babu |
| 6) | ಶೇಖರ್ ನಾಯಕ್ | AE, BWSSB | 9845444074 | |
| 7) | ಸಿದ್ದರಾಜು | AE. Bescom | 9449870177 | |
| 8) | K.V. ಚಂದ್ರಶೇಖರ್ | Veternary | 9480683056 | |
| 9) | ವಿನೋದ್ | Marshal. W-102 | 9663084662 | [signature] |
| 10) | ಹೇಮಂತ್‌ಕುಮಾರ್ | RWAs | 9448362208 | [signature] |
| 11) | ಚಂದ್ರಪ್ಪ | —॥— | 9845763281 | [signature] |
| 12) | ದೇವರಾಜು | —॥— | 9632584986 | |
| 13) | ಸಿದ್ದಗಂಗಮ್ಮ | —॥— | 990239918 | |
| 14) | ಪ್ರೇಮ | —॥— | 9632728915 | Prema |

| ಕ್ರಮ ಸಂಖ್ಯೆ | ಹೆಸರು | ಪದನಾಮ | ಮೊಬೈಲ್ ಸಂಖ್ಯೆ | ಸಹಿ |
|---|---|---|---|---|
| 15) | ಗೌರಮ್ಮ | RWA's | 9740249333 | K. Gowr |
| 16) | ರಾಜ್‌ಕುಮಾರ್ | —‖— | 8553779344 | Raj |
| 17) | ಕೆ.ಹೆಚ್. ದಿನೇಶ್ | Water Inspector BWSSB | 9945401088 | [signature] |
| 18) | ರಂಗನಾಥ್.H | AEE, Nagapura | | [signature] 19/6/21 |